ಆ) ಸ್ಥಳೀಯ ಸಂಸ್ಥೆಗಳ ಕರ ವಸೂಲಾತಿಯು ತೃಪ್ತಿಕರವಾಗಿರುವುದಿಲ್ಲ ಅಲ್ಲದೆ, ರಾಜ್ಯದಲ್ಲಿ ಸತತವಾಗಿ ಮೂರು ವರ್ಷಗಳು ಬರಗಾಲ ಪೀಡಿತವಾಗಿದ್ದು ಕರ ಸಂಗ್ರಹಣೆ ಕುಂಠಿತವಾಗಿರುತ್ತದೆ ಅಲ್ಲದೆ, ಸ್ಥಳೀಯ ಸಂಸ್ಥೆಗಳು ವಸೂಲಾದ ಕರದಲ್ಲಿನ ಬಹುಪಾಲು ಮೊತ್ತವನ್ನು ಕುಡಿಯುವ ನೀರಿನ ಬಾಬತ್ತಿಗೆ ಆದ್ಯತೆ ನೀಡಿ ಉಪಯೋಗಿಸಿರುವುದರಿಂದ ಗ್ರಂಥಾಲಯ ಕರ ಬಾಕಿ ಇರಲು ಕಾರಣವಾಗಿದೆ

ಇ) ಗ್ರಂಥಾಲಯ ಕರವನ್ನು ನೇರವಾಗಿ ಗ್ರಂಥಾಲಯ ಇಲಾಖೆಯು ವಸೂಲು ಮಾಡುತ್ತಿರುವುದಿಲ್ಲ ಸಂಬಂಧಿಸಿದ ಇಲಾಖೆಗಳು ವಸೂಲು ಮಾಡುತ್ತಿದೆ ಗ್ರಂಥಾಲಯ ಕರವನ್ನು ವಸೂಲು ಮಾಡಲು ಸಂಬಂಧಿಸಿದ ಇಲಾಖೆಗಳೊಡನೆ ಚರ್ಚೆ ನಡೆದಿರುತ್ತದೆ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರವು ನೀಡುವ ಅನುದಾನದಿಂದ ಗ್ರಂಥಾಲಯ ಕರವನ್ನು ಕಡಿತಗೊಳಿಸಿ ಇಲಾಖೆಗೆ ಪಡೆಯಲು ಪ್ರಯತ್ನಿಸಲಾಗುತ್ತಿದೆ

ಈ) ಬಾಕಿ ಉಳಿಸಿಕೊಂಡಿರುವ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿಗಳು, ಗ್ರಾಮ ಪಂಚಾಯಿತಿಗಳು, ಅನುಸೂಚಿತ ಪ್ರದೇಶಗಳು ಮತ್ತು ನಗರ ಪಾಲಿಕೆಗಳು ಸೇರಿರುತ್ತವೆ

ಇಲ್ಲ

ಉ) ಉದ್ಭವಿಸುವುದಿಲ್ಲ

ಬೆಂಗಳೂರಿನಲ್ಲಿರುವ ಹೆಸರಘಟ್ಟ ಬಳಿ ಸ್ಟುಡಿಯೋ ನಿರ್ಮಾಣ

175 (225) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ಉನ್ನತ ಶಿಕ್ಷಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಸೇರಿದಂತೆ ಕರ್ನಾಟಕದಲ್ಲಿ ಇರುವ ಚಲನಚಿತ್ರ ಸ್ಟುಡಿಯೋಗಳ ಸಂಖ್ಯೆ ಎಷ್ಟು ಇದರಲ್ಲಿ ಸರ್ಕಾರ ಹಾಗೂ ಖಾಸಗೀ ಸಂಸ್ಥೆಗಳ ಸ್ಟುಡಿಯೋಗಳೆಷ್ಟು

ಆ) ಹೊಸದಾಗಿ ಸ್ಟುಡಿಯೋ ನಿರ್ಮಿಸಲು ಬೆಂಗಳೂರು ಬಳಿ ಜಾಗ ಮೀಸಲಾಗಿದೆಯೇ, ಎಷ್ಟು ಎಕರೆ ಪ್ರದೇಶವಿದ ಈ ಜಾಗ ಯಾರ ವಶದಲ್ಲಿದೆ

ಇ) ಈ ಜಾಗವನ್ನು ಮಾರಾಟ ಮಾಡಲು ಮುಂದೆ ಬಂದಿರುವರೇ, ಇದನ್ನು ಯಾವ ಸಂಸ್ಥೆಗೆ ನೀಡಲು ಉದ್ದೇಶಿಸಲಾಗಿದೆ

ಈ) ಹಾಲಿವುಡ್ ಕಂಪನಿಯೊಂದು ಈ ಕಾರ್ಯಕ್ಕೆ ಮುಂದೆ ಬಂದಿರುವುದು ನಿಜವೇ?

ಉ) ಆ ಸ್ಟುಡಿಯೋದ ವೈಶಿಷ್ಟ್ಯಗಳೇನು ಇದರ ಸಾಮರ್ಥ್ಯ ಎಷ್ಟು ಇಲ್ಲಿ ಎಂತಹ ಚಿತ್ರಗಳ ಚಿತ್ರೀಕರಿಸಬಹುದಾಗಿದೆ (ವಿವರ ನೀಡುವುದು)?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಹಾಗೂ ವಾರ್ತಾ ಸಚಿವರು)

ಅ) ಕರ್ನಾಟಕದಲ್ಲಿ ಒಟ್ಟು 4 ಚಲನಚಿತ್ರೀಕರಣ ಸ್ಟುಡಿಯೋಗಳಿರುತ್ತದೆ ಶ್ರೀ ಕಂಠೀರವ ಸ್ಟುಡಿಯೋ ನಿಯಮಿತವು ಸರ್ಕಾರೀ ಸ್ವಾಮ್ಯದ ಸ್ಟುಡಿಯೋವಾಗಿರುತ್ತದೆ ಮೇ ಅಭಿಮಾನ್ ಸ್ಟುಡಿಯೋ, ಮೇ ಮಧು ಆರ್ಟ್ಸ್ ಸ್ಟುಡಿಯೋ ಮೇ ರಾಕ್‌ಲೈನ್ ಸ್ಟುಡಿಯೋ ಇವುಗಳು ಖಾಸಗೀ ಸ್ಟುಡಿಯೋಗಳಾಗಿರುತ್ತದೆ

ಆ) ಇದೆ ಬೆಂಗಳೂರು ನಗರಕ್ಕೆ ಸಮೀಪದ ಹೆಸರಘಟ್ಟ ಬಳಿ 302 ಎಕರೆ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಜಮೀನನ್ನು ಮೀಸಲಿಡಲಾಗಿದೆ ಈ ಜಾಗವು ಸಧ್ಯಕ್ಕೆ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮದ ವಶದಲ್ಲಿರುತ್ತದೆ

ಇ) ಈ ಜಾಗವನ್ನು ಮಾರಟ ಮಾಡುವ ಯಾವುದೇ ಉದ್ದೇಶವಿರುವುದಿಲ್ಲ

ಈ) ಅಧಿಕೃತವಾಗಿ ಯಾವುದೇ ಹಾಲಿವುಡ್ ಕಂಪನಿಗಳು ಈ ಕಾರ್ಯಕ್ಕೆ ಮುಂದೆ ಬಂದಿರುವುದಿಲ್ಲ

ಉ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲತ್ಯ

ರಾಜ್ಯದ ಜಿಲ್ಲಾ ಪಂಚಾಯ್ತಿ ಹಣ ದುರುಪಯೋಗ ಪ್ರಕರಣ

171 (209) ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲಾ ಪಂಚಾಯತ್‌ಗಳಲ್ಲಿ ಹಣ ದುರುಪಯೋಗ, ಕಾಮಗಾರಿ ಅವ್ಯವಹಾರ ಮುಂತಾದ ಪ್ರಕರಣಗಳು ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಜಿಲ್ಲಾ ಪಂಚಾಯತ್‌ಗಳಲ್ಲಿ ನಡೆದಿವೆ

ಆ) ಈ ಪ್ರಕರಣದಲ್ಲಿ ದುರುಪಯೋಗವಾದ ಮೊತ್ತವೆಷ್ಟು ಕಾಮಗಾರಿವಾರು, ಜಿಲ್ಲಾವಾರು, ಅವ್ಯವಹಾರದ ಮಾಹಿತಿ ನೀಡಿ

ಇ) ಇಂತಹ ಪ್ರಕರಣಗಳಲ್ಲಿ ಉದ್ದೇಶಪೂರ್ವಕ ಮತ್ತು ಅನಗತ್ಯ ವಿಳಂಬ ಉಂಟಾಗುತ್ತಿರುವ ಸಂಗತಿ ನಿಜವೆ,

ಈ) ಇದಕ್ಕೆ ಕಾರಣವೇನು ತನಿಖಾಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಈ ವ್ಯವಹಾರದಲ್ಲಿ ಶಾಮೀಲಾಗಿರುವ ಶಂಕೆ ಕಂಡುಬಂದಿದೆಯೇ

ಉ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು

ಊ) ಅಪರಾಧ ಎಸಗಿರುವ ಪ್ರಕರಣಗಳಲ್ಲಿ ಈವರೆಗೂ ಕ್ರಮ ಜರುಗಿಸದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಎಂ ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 27 ಜಿಲ್ಲಾ ಪಂಚಾಯತ್‌ಗಳಲ್ಲಿ ಅವ್ಯವಹಾರ ನಡೆದಿರುವುದು ಪತ್ತೆಯಾಗಿದೆ ಜಿಲ್ಲಾ ಪಂಚಾಯತ್‌ವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ರೂ 1470,48 ಲಕ್ಷಗಳು, (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಅವ್ಯವಹಾರಗಳು ಕಂಡುಬಂದ ತಕ್ಷಣ ಕಾಲಕಾಲಕ್ಕೆ ನಿಯಮಾನುಸಾರ ಸಂಬಂಧಿಸಿದವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುತ್ತಿದೆ